ಈ ಆಸಾಮಿ ಸುಲಭಕ್ಕೆ ಮುಗಿಸಲ್ಲ ಅಂತ ಗೊತ್ತಾಗಿಹೋಯ್ತು. ತಟ್ಟನೆ ಸ್ವಿಚ್ ಆಫ್ ಆಗಿಬಿಟ್ಟೆ.

ಬಾಲ್ಯದಲ್ಲಿ ಈ ಕಥೆಗಾರನ ಪುಸ್ತಕಗಳನ್ನು ಅದೆಷ್ಟು ಆಸ್ಥೆಯಿಂದ ಓದುತ್ತಿದ್ದೆ ಅಂತ ನೆನಪಾಯ್ತು. ಅಷ್ಟಕ್ಕೂ ವಯಸ್ಸೆಷ್ಟು? ಆಗ ತಾನೇ ಹೈಸ್ಕೂಲು ಹತ್ತಿದ್ದಿರಬಹುದು. ಇವರದ್ದೋ ವೈಚಾರಿಕ ಬರಹಗಾರ ಅಂತ ಆಗಾಗಲೇ ದೊಡ್ಡ ಹೆಸರು. ಏನು ಸಿಕ್ಕರೂ ಮೇಯುವ ಬೌದ್ಧಿಕ ವಯಸ್ಸದು. ಮುದ್ರಿತ ರೂಪದಲ್ಲಿದ್ದ ಎಲ್ಲವನ್ನೂ ಆಸಕ್ತಿಯಿಂದ ಓದುತ್ತಿದ್ದೆ. ಅರ್ಥವಾಗುತ್ತಿತ್ತೋ ಬಿಡುತ್ತಿತ್ತೋ ನಿಲ್ಲಿಸುತ್ತಿರಲಿಲ್ಲ. ಅದರ ಜೊತೆ ಜನರಲ್ ಲೈಬ್ರರಿ, ಸರ್ಕ್ಯುಲೇಟಿಂಗ್ ಲೈಬ್ರರಿ ಅಂತ ಓಡಾಡಿಕೊಂಡು ಪುಸ್ತಕ ಓದುತ್ತಿದ್ದ ಕಾಲ. ಕಾಲೇಜಿನಲ್ಲೂ ಮುಂದುವರೆದಿತ್ತು. ಕನ್ನಡದ ಕಾದಂಬರಿಗಳ ಜೊತೆ ಇಂಗ್ಲಿಷ್ ಕೂಡ ಓದಲು ಆಗಲೇ ಶುರುಮಾಡಿದ್ದು.

ಅದೆಷ್ಟೋ ಜನರ ಕನ್ನಡ ಪುಸ್ತಕಗಳು ಆಂಗ್ಲ ಭಾಷೆಯ ನಕಲುಗಳು ಅಂತ ಆಗ ಅರ್ಥವಾಗಲು ಶುರುವಾಗಿತ್ತು. ಆದರೆ ಹಾಗಂತ ಬರಹಗಾರರು ಮುದ್ರಿಸಿಕೊಂಡದ್ದನ್ನು ಕಂಡಿರಲಿಲ್ಲ. ಇನ್ನು ಕೆಲವರು ಆಸಕ್ತಿದಾಯಕವಾಗಿ ಬರೆದರೂ ಅವರ ಬರಹಗಳಿಗೆ ಒಂದು ತಿರುಳಿರಲಿಲ್ಲ. ಆದರೆ ಇವನು... ಬರೆದದ್ದೆಲ್ಲ ಒಂದು ಕಾಲಕ್ಕೆ ಅರ್ಥಗರ್ಭಿತ ಅನ್ನಿಸಿದರೂ ನಂತರದ ವರ್ಷಗಳಲ್ಲಿ ಅವುಗಳ ಹಿಂದಿದ್ದ ಹುನ್ನಾರವೇ ಬೇರೆ ಅನ್ನುವುದು ಅರ್ಥವಾಗುತ್ತ ಹೋಗಿತ್ತು. ಅಷ್ಟಕ್ಕೂ ಅದು ಬರಹ ಮಾತ್ರ ಅಲ್ಲವೇ? ಏನು ಬೇಕಾದರೂ ಬರೆಯಲು ಎಲ್ಲರಿಗೂ ಹಕ್ಕಿರುವಾಗ ಈತ ಮಾಡಿದ ಅಪರಾಧ ದೊಡ್ಡದೇನಿರಲಿಲ್ಲ. ಅದೇ ರೀತಿ, ಪುಸ್ತಕಗಳನ್ನು ಓದಿ ಅನ್ನಿಸಿದ್ದನ್ನು ಸಾರ್ವಜನಿಕವಾಗಿ ಹೇಳುವ ಹಕ್ಕು ಓದುಗನಿಗಿದೆ ಎನ್ನುವುದು ಕೂಡ ಸತ್ಯವಲ್ಲವೇ? ಹಾಗಂತ ನನಗೆ ನಾನೇ ಸಮಜಾಯಿಷಿ ಕೊಟ್ಟುಕೊಂಡಿದ್ದೆ.

ಐದುನೂರು ಜನ ಅಭಿಮಾನಿಗಳು ತುಂಬಿದ್ದ ಸಭಾಂಗಣ. ಎಲ್ಲರೂ ಕಥೆಗಾರನನ್ನು ಹೊಗಳಲು ತಾನೇ ಮುಂದು ಎಂದು ನಿಂತಿದ್ದ ಸಮಯ. ಇಲ್ಲಿ ಸತ್ಯವೂ ಸುಳ್ಳಾಗಿ ಕಂಡರೆ ಅಚ್ಚರಿಯೇನಿರಲಿಲ್ಲ. ಇಂತಹ ಕಡೆ, ಹೊಗಳಿಕೆಯಲ್ಲದ ನಿಜವಾದ ವಿಮರ್ಶೆಗೆ ಜಾಗವಿದೆಯೇ? ಸಿದ್ಧಸೂತ್ರಗಳನ್ನು ಆಧರಿಸಿ ನಡೆಯುತ್ತಿರುವ ಕಾರ್ಯಕ್ರಮವಿದು. ಸಂಪ್ರದಾಯಬದ್ಧವಾಗಿ ನಡೆವ ಇಂತಹ ಕಾರ್ಯಕ್ರಮದಲ್ಲಿ ಅನಿಸಿದ ಹಾಗೆ ನಕಾರಾತ್ಮಕವಾಗಿ ಪುಸ್ತಕ ವಿಮರ್ಶೆ ಮಾಡಲು ಅವಕಾಶವಿದೆಯೇ? ಇದ್ದ ಅಲಿಖಿತ ನಿಯಮಗಳಿಗೆ ನೇರ ಸಡ್ಡು ಹೊಡೆದು ನಿಂತರೆ, ಇವರೆಲ್ಲ ನನ್ನನ್ನು ಅಟಕಾಯಿಸಿ ಬಹಿಷ್ಕಾರ ಹಾಕಬಹುದೇ? ಮಂದೆಯಲ್ಲಿ ನುಗ್ಗಿದ ಸೂಯಿಸೈಡ್ ಬಾಂಬಿನಂತೆ ಅನ್ನಿಸತೊಡಗಿತು. ಇಡೀ ಸಭಾಂಗಣ ಕಾವೇರಿದಂತೆ ಅನ್ನಿಸಿ ಇಹಲೋಕಕ್ಕೆ ಬಂದೆ.

ಅವನು ಧಾರಾಕಾರವಾಗಿ ಬೆವರುತ್ತಿದ್ದ. ಧ್ವನಿ ಬೆದರಿದಂತಿತ್ತು.

ಅದಕ್ಕೂ ಒಂದೆರಡು ಕಾರಣಗಳಿದ್ದವು. ಅತಿಥಿಗಳು ತಡವಾಗಿ ಬಂದ ಕಾರಣ ಕಾರ್ಯಕ್ರಮ ಏರುಪೇರಾಗಿತ್ತು. ಮೊದಲು ಅತಿಥಿಗಳ ಭಾಷಣ, ನಂತರ ಅವರ ಪುಸ್ತಕವನ್ನು ವಿಮರ್ಶಿಸಿ ಮಾತಾಡಲು ನಾವೊಂದೈದು ಜನ ಅಂತ ಕಾರ್ಯಕ್ರಮ ಇದ್ದದ್ದು. ಆದರೆ ಅತಿಥಿಗಳು ಒಂದೂವರೆ ಗಂಟೆ ತಡವಾಗಿ ಬಂದಿದ್ದರು. ಅವರನ್ನೇ ಮೊದಲು ಮಾತಾಡಲು ಬಿಟ್ಟರೆ, ಮಿಕ್ಕವರ ಮಾತು ಕೇಳಲು ಯಾರೂ ಉಳಿಯುವುದಿಲ್ಲ. ಹಾಗಾಗಿ ಪುಸ್ತಕ ವಿಮರ್ಶೆಯೇ ಮೊದಲು ನಡೆಯಲಿ ಅಂತ ಆಯೋಜಕರು ನಿರ್ಧಾರ ಮಾಡಿದ್ದರು. ಇದ್ದಕ್ಕಿದ್ದಂತೆ ಹೆಸರನ್ನು ಕೂಗಿದ್ದರಿಂದ ಇವನಿಗೆ ಗಾಬರಿಯಾಗಿತ್ತು. ಕಂಠಪಾಠ ಮಾಡಿಕೊಂಡದ್ದೆಲ್ಲ ಅಲ್ಲಲ್ಲಿ ಮರೆತುಹೋಗಿ ಒಂದು ವಾಕ್ಯಕ್ಕೂ ಇನ್ನೊಂದಕ್ಕೂ ಸಂಬಂಧ ಕಲ್ಪಿಸಲು ತಿಣುಕುತ್ತಿದ್ದ. ಈ ಗಲಿಬಿಲಿಯ ಮಧ್ಯದಲ್ಲಿ ಕೊನೆಗೆ ಹೇಳಬೇಕಾದುದನ್ನೆಲ್ಲ ಮೊದಲೇ ಹೇಳಿಬಿಟ್ಟಿದ್ದ. ಹೀಗಾಗಿ ಮುಂದೆ ಹೇಳಬೇಕಾದುದು ಯಾವ ಹಾಳೆಯಲ್ಲಿದೆ ಎಂದು ನೆನಪಾಗದೆ ಹಾಳೆಗಳನ್ನು ತಿರುಗಿಸಿ, ತಿರುಗಿಸಿ ನೋಡುತ್ತ, ಹೇಳಿದ್ದ ವಾಕ್ಯವನ್ನು ಮತ್ತೆ ಮತ್ತೆ ಹೇಳತೊಡಗಿದ.

ಅಲ್ಲೇ ಪ್ರಮಾದವಾಗಿತ್ತು. ಈಗಾಗಲೇ ಸಹನೆಯಿಂದ ಕಾಯುತ್ತ ಕುಳಿತಿದ್ದ ಜನರೆಲ್ಲ ಈಗ ತಾಳ್ಮೆ ತಪ್ಪಿ ಗುಸು ಗುಸು ಮಾತಾಡಲು ಶುರುಮಾಡಿದ್ದರು. ಅದರ ಅರಿವಾಗುತ್ತಲೇ ಅವನು ಇನ್ನೂ ಬೆದರಿನಿಂತಿದ್ದ. ಕನ್ನಡ ಸಾಹಿತಿಗಳ ಎದುರು, ಕನ್ನಡ ಕಾರ್ಯಕ್ರಮದಲ್ಲಿ ಕನ್ನಡದಲ್ಲಿ ಮಾತಾಡಲು ಮಾಡಿದ್ದ ಪ್ರಯತ್ನವೆಲ್ಲ ಹೊಳೆಯಲ್ಲಿ ಕಲಸಿದ ಹುಣಿಸೇಹುಳಿಯಾಗಿತ್ತು. ನಾಲಗೆಯಲ್ಲಿ ಬೆಂಗಳೂರಿನ ಇಂಗ್ಲಿಷ್ ಬೆರಕೆಯಾಗತೊಡಗಿತು. ಆದರೆ ಹೇಳಬೇಕಾದ್ದನ್ನೆಲ್ಲ ಹೇಳದೆ ಮಾತನ್ನು ಹೇಗೆ ಮುಗಿಸುವುದು ಎನ್ನುವ ಪ್ರಶ್ನೆ ಶುರುವಾಗಿತ್ತು. ಮತ್ತೆ ಮೊದಲಿಂದ ಶುರುಮಾಡದ ಹೊರತು ಇದುವರೆಗೆ ತಾನು ಏನನ್ನು ಮಾತನಾಡಿದೆ ಎನ್ನುವುದು ಅವನಿಗೆ ಸುತಾರಾಂ ಮರೆತುಹೋಗಿಬಿಟ್ಟಿತ್ತು. ಜನರಿಗೆ ಅವನನ್ನು ನೋಡುವುದು ಹಿಂಸೆಯಾಗತೊಡಗಿತು. ಅಯ್ಯೋ ಪಾಪ ಅನ್ನಿಸಿತೋ ಏನೋ ಅವನೆಡೆ ನೋಡುವುದನ್ನು ನಿಲ್ಲಿಸಿ ತಮ್ಮ ತಮ್ಮಲ್ಲೇ ಮಾತಾಡಲು ಶುರುಮಾಡಿದರು. ಇಪ್ಪತ್ತು ನಿಮಿಷಗಳ ನಂತರ ಅವನ ಎದೆ ಬಡಿತ ತಹಬದಿಗೆ ಬಂದಿತ್ತು. ಕೊನೆಗೆ ಆಯೋಜಕ ಪಕ್ಕದಲ್ಲಿ ನಿಂತು ಗಡಿಯಾರ ತೋರಿಸಿದ ನಂತರ 'ಥ್ಯಾಂಕ್ಯೂ' ಅಂತ ಕೈ ಮುಗಿದು ಅಗಲವಾದ್ದೊಂದು ನಗೆ ಬೀರಿ ಮಾತು ಮುಗಿಸಿದ.

ಅಲ್ಲೊಂದು ಇಲ್ಲೊಂದು ಚಪ್ಪಾಳೆ ಬಿದ್ದಿತು. ಕೊನೆಗೂ ಇವನ ಮಾತು ಮುಗಿಯಿತು ಎಂದು ತಡವಾಗಿ ಅರಿತವರು ಸದ್ಯ ಮುಗಿಸಿದನಲ್ಲ ಅಂತ ಎರಡನೆಯ ಬಾರಿ ಅಲೆ ಅಲೆಯಾಗಿ ಚಪ್ಪಾಳೆ ತಟ್ಟಿದರು. ಅವನು ತನ್ನ ವಾಕ್ಚಾತುರ್ಯಕ್ಕೇ ಬಿದ್ದ ಚಪ್ಪಾಳೆಯಿರಬೇಕೆಂದು ತಿಳಿದು ಮತ್ತೊಮ್ಮೆ ಜನರಿಗೆ ವಂದಿಸಿದ. ಮುಂದಿನ 'ಐಟಂ'ಗೆ ಜನ ತಯಾರಾದರು.

ಕಂಚಿನ ಕಂಠದ ಹೆಂಗಸು. ಭರ್ಜರಿ ರೇಷ್ಮೆ ಸೀರೆ

'ನಂಗೊತ್ತು... ನೀವೆಲ್ಲ ದೇವರ ಪ್ರಸಾದಕ್ಕೆ ಕಾಯ್ತಾ ಇದ್ದೀರ ಅಂತ. ಆದ್ರೆ ದೇವಸ್ಥಾನಕ್ಕೆ ಹೋದ ನಂತರ ಮಂತ್ರ, ಪೂಜೆ, ಅಭಿಷೇಕ, ಮಂಗಳಾರತಿ ಇವೆಲ್ಲ ನಡೆಯದೆ ಪ್ರಸಾದ ಸಿಗುತ್ತದೆಯೇ. ಹಾಗೇ ಇದೂನೂ. ನಮ್ಮೆಲ್ಲರ ಮಾತನ್ನು ಕೇಳದೆ ತಟ್ಟಂತ ದೇವರಂತ ನಮ್ಮ ಅತಿಥಿಗಳ ಭಾಷಣಕ್ಕೇ ಹಾರೋಕ್ಕಾಗತ್ತಾ' ಅಂತ ಸಮಜಾಯಿಷಿ ಕೊಟ್ಟ ಶುರುಮಾಡಿದಳು.

ನನ್ನ ಭಾಷಣದ ಅಭಿಷೇಕ ಮುಗಿಸುವವರೆಗೆ ನೀವು ಕೇಳೋಕೆ ಬಂದಿರೋ ಅತಿಥಿಗಳನ್ನು ಮಾತಾಡೋಕೆ ಬಿಡೋಲ್ಲ ಅಂತ ಆಕೆ ಹಾಕಿದ ಲಕ್ಷ್ಮಣರೇಖೆಯನ್ನು ಈಗ ಆಯೋಜಕರು ಕೂಡ ಮೀರುವಂತಿರಲಿಲ್ಲ. 'ಅಯ್ಯೋ ನಮ್ಮ ಜನರೇ' ಅನ್ನಿಸದಿರಲಿಲ್ಲ. ಇದೊಂದು ಸಾಹಿತ್ಯ ಸಂಜೆಯಂತೆ. ಆಗಲೇ ಅತಿಥಿಗಳನ್ನು ದೇವರನ್ನಾಗಿಸಿಯಾಗಿತ್ತು. ಇನ್ನು ಉಳಿದವರು ಭಕ್ತರು ಮತ್ತು ಪೂಜಾರಿಗಳು. ಇನ್ನಿಲ್ಲಿ ಭಕ್ತಿ ರಸ ಉಕ್ಕುತ್ತದೆಯೇ ಹೊರತು ಆ ಕಥೆಗಾರನಿಗೆ ಅವನ ಬರಹದ ಬಗ್ಗೆ ಹೇಳುವವರು ಕೇಳುವವರು ಯಾರೂ ಉಳಿದಿಲ್ಲ ಎನ್ನುವುದು ನನಗೆ ಖಚಿತವಾದಂತಿತ್ತು. ಸುತ್ತಲೂ ಒಮ್ಮೆ ತಿರುಗಿ ನೋಡಿದೆ. ಕುಂಕುಮದ ತಿಲಕ, ಗಂಧ, ಅಕ್ಷತೆಯ ಹಲವು ಹಣೆಗಳು ಕಂಡವು. ಭಕ್ತಿರಸಭಾವ ಸುತ್ತಲೂ ಪಸರಿಸಿತ್ತು. ಇನ್ನಿಲ್ಲಿ ಶಂಖ ಜಾಗಟೆಗಳೇ ಕೇಳಿಬರುವುದು ಅನ್ನಿಸಿತು. ಬರಿಯ ಔಪಚಾರಿಕತೆಯೇ ತುಂಬಿದ್ದ ಸಭೆಯದು.

ವೈಚಾರಿಕತೆಯ ಚರ್ಚೆಗಳಿಂದ ತುಂಬಿದ ಕೂಟಗಳು ಇತ್ತೀಚೆಗೆ ನಮ್ಮ ಸಮಾಜದಲ್ಲಿ ನಡೆಯುವುದು ಸಾಧ್ಯವೇ ಇಲ್ಲವೇನೋ. ಎಲ್ಲವೂ ಮರ್ಜಿಯಲ್ಲಿ ನಡೆಯುವ ಕಲಾಪಗಳು. ಇಂತಹವರ ಮುಂದೆ ನನ್ನ ವೈಚಾರಿಕ ವಿಮರ್ಶೆಯ ಅಸಂಬದ್ಧತೆ ಬಗ್ಗೆ ನನಗೆ ಅರಿವಾಗತೊಡಗಿತು. ಯಾವ ಪ್ರಯೋಜನಕ್ಕೆ ನನ್ನ ಈ ಸಿದ್ಧತೆ? ಸುಮ್ಮನೆ ಮನೆಯಲ್ಲಿರಬಹುದಿತ್ತಲ್ಲ ಅನ್ನಿಸಿತು. ಈ ರಾಜೇಶನಾದರೂ ಯಾಕೆ ಬರಲಿಲ್ಲ? ಬರುತ್ತೇನೆ ಎಂದರೆ ಖಂಡಿತ ಬರುತ್ತಾನೆ. ಆದರೆ ಇನ್ನೂ ಯಾಕೆ ಬರಲಿಲ್ಲ?

ಕಂಚಿನ ಕಂಠದ ಮಹಿಳೆ ಮಾತಾಡುತ್ತಿದ್ದಳು. ಅವಳು ಆರಿಸಿಕೊಂಡಿದ್ದ ಕಥೆಯಲ್ಲಿ ಆಧುನಿಕ ಹೆಣ್ಣಿನ ಪರೋಕ್ಷ ಹೀಗಳಿಕೆ ಇತ್ತು. ಹೆಣ್ಣೇನಾದರೂ ಗಂಡಸಿಗೆ ಸರಿ ಸಮಾನಳಾದರೆ ನಮ್ಮ ಸಮಾಜದ ಬುನಾದಿಯೇ ಅಲುಗಾಡಿಹೋಗುತ್ತದೆ ಎನ್ನುವ ಗುಪ್ತ ಸಂದೇಶವಿತ್ತು. ಪ್ರಪಂಚದಲ್ಲಿ ಏನು ಬೇಕಾದರೂ ಆಗಲಿ, ಆದರೆ ನಮ್ಮ ಭಾರತೀಯ ಸಮಾಜದ ಹೆಣ್ಣುಮಕ್ಕಳ ಸ್ಥಾನ ಮಾತ್ರ ಯಾವಾಗಲೂ ಗಂಡಸಿನ ಕೆಳಗಿರಬೇಕು ಎನ್ನುವುದನ್ನು ಈ ಕಥೆಯಲ್ಲಿ ನೇರವಾಗಿ ಹೇಳದೆ ಪರೋಕ್ಷವಾಗಿ ಬರೆದಿದ್ದ ಈ ಸಾಹಿತಿ.

ಆದರೆ ಈ ವಿಮರ್ಶಕಿ, ಲೇಖಕರು ಹೆಂಗಸಿನ ಹೆಂಗರುಳನ್ನು ಅರಿತು ಬರೆದ ಮೇಧಾವಿತನದ ಬಗ್ಗೆ ಕೊಂಡಾಡುತ್ತಿದ್ದಳು. ತಾನು ಸ್ತ್ರೀಪರ ಹೋರಾಟಗಾರ್ತಿಯೆಂದು ಗುರುತಿಸಿಕೊಳ್ಳುತ್ತಿದ್ದಳು. ಆಗಾಗ ಆಯೋಜಕರಲ್ಲಿ ಒಬ್ಬನಾದ ತನ್ನ ಗಂಡ ಅವಳ ವಾಗ್ಝರಿಯನ್ನು ಫೋನಿನಲ್ಲಿ ಸೆರೆ ಹಿಡಿಯುತ್ತಿದ್ದಾನೆಯೇ ಗಮನಿಸಿ ನಗೆ ಹರಿಸುತ್ತಿದ್ದಳು. ಕಥೆ ಮಾತ್ರ ಅವಳಿಗೆ ಸುತಾರಾಂ ಅರ್ಥವಾಗಿರಲಿಲ್ಲ. ತನಗೆ ಬೇಕಾದಂತೆ ಅರ್ಥ ಮಾಡಿಕೊಂಡು ಸಭಿಕರಿಗೆ ಅದನ್ನೇ ಉಣಬಡಿಸುತ್ತಿದ್ದಳು.

ಮತ್ತೊಮ್ಮೆ ಫೋನಿನಲ್ಲಿದ್ದ ಮೆಸೇಜ್ ಚೆಕ್